MVC.No.285/2024
PW.1

ದಿನಾಂಕ:**22.01.2026** ರಂದು ಸಾಕ್ಷಿಯನ್ನು ಮುಖ್ಯ ವಿಚಾರಣೆಗಾಗಿ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ</u>: ಅರ್ಜಿದಾರರ ಪರ: ಶ್ರೀ.ಎಸ್. ಎಸ್. ಆರ್. ವಕೀಲರಿಂದ.

ಬಸವಕಲ್ಯಾಣ ಗ್ರಾಮೀಣ ಪೋ.ಠಾ.ಕ್ರೈ.ನಂ.135/2023 ರಲ್ಲಿ ದಾಖಲಾದ ಪ್ರ.ವ.ವರದಿ, ದೂರು, ದೂರುದಾರರ ಪುರವಣಿ ಹೇಳಿಕೆ, ನನ್ನ ಹೇಳಿಕೆ, ಸ್ಥಳ ಪಂಚನಾಮೆ, ನನ್ನ ಗಾಯದ ಪ್ರಮಾಣ ಪತ್ರ, ವಾಹನ ತಪಾಸಣಾ ವರದಿ, ಅಂತಿಮ ವರದಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ1 ರಿಂದ 8 ಎಂದು, ಯುನೈಟೆಡ್ ಆಸ್ಪತ್ರೆಯವರು ನೀಡಿದ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.9 ಎಂದು, ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.10 ಎಂದು, ಒಂದು ರೆಡಿಯಾಲೊಜಿ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.11 ಎಂದು, ಯುನೈಟೆಡ್ ಆಸ್ಪತ್ರೆಯವರು ನೀಡಿದ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.12 ಎಂದು (ರೂ.62,000/-), ಒಟ್ಟು 28 ವೈದ್ಯರ ಸಂದರ್ಶನ, ಔಷಧಿ, ರೆಡಿಯಾಲೊಜಿ ಮತ್ತು ಪೆಥಾಲೊಜಿ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.13 ಎಂದು, ಒಂದು ರೆಡಿಯಾಲೊಜಿ ವರದಿಯನ್ನು ಹಾಜರುಪಡಿಸಿದ್ದು ಅದನ್ನಿ ನಿಪಿ.14 ಎಂದು, ಪೆಥಾಲೊಜಿ ವರದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.15 ಎಂದು, ವೈದ್ಯರ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.16 ಎಂದು, ಎರಡು ಎಕ್ಸರೇ ಫಿಲಮಗಳನ್ನು ಹಾಜರುಪಡಿಸಿದ್ದು ಅವುಗಳಜ್ಞು ನಿಪಿ.17 ಎಂದು ಗುರುತಿಸಲಾಯಿತು. ವಾಹನ ಸಂ.ಎಮ್ ಎಚ್-12/ಎಎಲ್-4908 ನೇದ್ದರ ಪರ್ಟಿಕುಲ್ಸ್, ವಾಹನ ಸಂ.ಕೆಎ-53/4261 ನೇದ್ದರ ಆರ್ ಸಿ ಕಾಪಿ, ಫಿಟ್ನೆಸ್ ಪ್ರಮಾಣ ಪತ್ರ, ವಿಮಾ ಪಾಲಿಸಿ ಹಾಗೂ ಮಹಮದ್ ಮುಜಾಮಿಲ್ ಇವರ ವಾಹನ ಚಾಲನಾ ಪರವಾನಿಗೆ ಅಟೆಸ್ಟೆಡ್ ಕಾಪಿಗಳನ್ನು ಹಾಜರುಪಡಿಸಿರುತ್ತೇನೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(**ಪಾಟೀ ಸವಾಲಿಗಾಗಿ ಸಮಯಾವಕಾಶ ನೀಡಿ ಮುಂದೂಡಲಾಯಿತು**)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-